# ಅಭ್ಯಾಸ 4.1

4.1.1. ವೃತ್ತವು ಹೊಂದಿರಬಹುದಾದ ಸ್ಪರ್ಶಕಗಳ ಸಂಖ್ಯೆ ಎಷ್ಟು? ವೃತ್ತದ ಪರಿಧಿಯ ಮೇಲೆ ಅಸಂಖ್ಯಾತ ಬಿಂದುಗಳಿರುವುದರಿಂದ ಅವುಗಳ ಮೇಲೆ ಎಳೆಯಬಹುದಾದ ಸ್ಪರ್ಶಕಗಳ ಸಂಖ್ಯೆ ಅಸಂಖ್ಯಾತ

4.1.2. ಬಿಟ್ಟ ಸ್ಥಳ ತುಂಬಿರಿ:

i) ವೃತ್ತವನ್ನು ಸ್ಪರ್ಶಕವೊಂದು ಛೇದಿಸುವ ಬಿಂದುಗಳ ಸಂಖ್ಯೆ __ಒಂದು ( ∵ ಸ್ಪರ್ಶಕವು ವೃತ್ತವನ್ನು ಕಡಿಯದೇ ಇರುವುದರಿಂದ ಸ್ಪರ್ಶಕವು ಛೇದಿಸುವ ಬಿಂದುಗಳ ಸಂಖ್ಯೆ ಒಂದು. )

ii) ವೃತ್ತವನ್ನು ಎರಡು ಬಿಂದುಗಳಲ್ಲಿ ಛೇದಿಸುವ ರೇಖೆಯೇ ______ ಛೇದಕ

iii) ಒಂದು ವೃತ್ತವು ಹೊಂದಿರಬಹುದಾದ ಸಮಾಂತರ ಸ್ಪರ್ಶಕಗಳ ಗರಿಷ್ಠ ಸಂಖ್ಯೆ ______ಎರಡು


( ∵ ವೃತ್ತದ ಮೇಲಿನ ಬಿಂದುವಿನ ಮೂಲಕ ಒಂದು ಸ್ಪರ್ಶಕವನ್ನು ಹಾಗೂ ಇನ್ನೊಂದನ್ನು ವೃತ್ತದ ಹೊರಗಿನ ಬಿಂದುವಿನಿಂದ ವೃತ್ತವನ್ನು ಕಡಿಯದಂತೆ ಎಳೆಯಬಹುದು.)

iv) ಒಂದು ವೃತ್ತ ಸ್ಪರ್ಶಕ ಮತ್ತು ಒಂದು ವೃತ್ತ ಹೊಂದಿರುವ ಸಾಮಾನ್ಯ ಬಿಂದುವೇ______ ಸ್ಪರ್ಶಬಿಂದು


4.1.3. 5cm ತ್ರಿಜ್ಯವಿರುವ ವೃತ್ತಕ್ಕೆ P ಬಿಂದುವಿನಲ್ಲಿ ಎಳೆದ ಸ್ಪರ್ಶಕ PQ. ಇದು ವೃತ್ತಕೇಂದ್ರ O ದಿಂದ ಎಳೆದ ರೇಖೆಯನ್ನು Q ಬಿಂದುವಿನಲ್ಲಿ ಸಂಧಿಸುತ್ತದೆ. OQ = 12cm ಆದರೆ PQ ಉದ್ದವು

(a)12cm (b) 13cm (c) 8.5cm (d) $\sqrt{119}$ cm

| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\angle OPQ = 90^0$ | ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ |
| 2 | $OQ^2 = OP^2 + PQ^2$ | |
| 3 | $12^2 = 5^2 + PQ^2$ | |
| 4 | $144 = 25 + PQ^2$ | |
| 5 | $PQ^2 = 144 - 25 = 119$ | |
| 6 | $PQ = \sqrt{119}$ | |




A Project of www.eShale.org


| | |
|---|---|
| 4.1.4 ವೃತ್ತವನ್ನು ರಚಿಸಿ. ಕೊಟ್ಟಿರುವ ರೇಖೆಗೆ ಸಮಾಂತರವಾಗಿರುವಂತೆ ವೃತ್ತಕ್ಕೆ ಒಂದು ರೇಖೆಯು ಸ್ಪರ್ಶಕ ಮತ್ತೊಂದು ರೇಖೆಯು ಛೇದಕವಾಗಿರುವಂತೆ ಎರಡು ರೇಖೆಗಳನ್ನು ಎಳೆಯಿರಿ. |  |

A Project of www.eShar

## ಅಭ್ಯಾಸ 4.2

4.2.1. ಒಂದು ಬಿಂದು Q ದಿಂದ, ವೃತ್ತಕ್ಕೆ ಎಳೆದ ಸ್ಪರ್ಶಕದ ಉದ್ದವು 24 cm ಮತ್ತು ವೃತ್ತಕೇಂದ್ರ ಹಾಗೂ Q ಬಿಂದು ನಡುವಿನ ದೂರ 25 cm ಆದರೆ ವೃತ್ತದ ತ್ರಿಜ್ಯವು a) 7 cm b) 12 cm c) 15 cm d) 24.5 cm


| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\angle OPQ = 90^0$ | ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ |
| 2 | $OQ^2=OP^2+PQ^2$ | |
| 3 | $25^2= OP^2+24^2$ | |
| 4 | $625= OP^2+576$ | |
| 5 | $OP^2=625-576=49$ | |
| 6 | OP=7cm | |




4.2.2. ಚಿತ್ರದಲ್ಲಿ $\angle POQ = 110^0$ ಆಗಿರುವಂತೆ, O ಕೇಂದ್ರವುಳ್ಳ ವೃತ್ತಕ್ಕೆ TP ಮತ್ತು TQ ಸ್ಪರ್ಶಕಗಳಾಗಿವೆ. ಹಾಗಾದರೆ $\angle PTQ$ ದ ಅಳತೆಯು

a) 60° b) 70° c) 80° d) 90°

| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\angle POQ+\angle PTQ= 180^0$ | POQT ಒಂದು ಚತುರ್ಭುಜ & ಚತುರ್ಭುಜದ ಅಭಿಮುಖ ಕೋನಗಳ ಮೊತ್ತ $180^0$ |
| 2 | $\angle PTQ=180^0-\angle POQ$ | |
| 3 | $=180^0-110^0=70^0$ | |





A Project of www.eShale

4.2.3. 'O' ವೃತ್ತಕೇಂದ್ರವಿರುವ ಒಂದು ವೃತ್ತಕ್ಕೆ P ಬಿಂದುವಿನಿಂದ ಎಳೆದ ಸ್ಪರ್ಶಕಗಳಾದ PA ಮತ್ತು PB ಗಳ ನಡುವಿನ ∠ 80° ಆದರೆ ∠POA ದ ಅಳತೆಯು


a) 50° b) 60° c) 70° d) 80°

| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\angle APB + \angle BOA = 180^0$ | POQT ಒಂದು ಚತುರ್ಭುಜ & ಚತುರ್ಭುಜದ ಅಭಿಮುಖ ಕೋನಗಳ ಮೊತ್ತ $180^0$ |
| 2 | $\angle BOA = 180^0 - \angle APB = 180^0 - 80^0 = 100^0$ | |
| 3 | $\angle AOP = \angle BOP$ | $\Delta POA$ ಮತ್ತು $\Delta POB$ ಗಳು ಸರ್ವಸಮ (ಬಾ.ಬಾ.ಬಾ. ಸ್ವಯಂಸಿದ್ಧ) |
| 4 | $\angle BOA = 2\angle AOP$ | (4) ರಿಂದ |
| 5 | $\angle AOP = 50^0$ | (3) ರಿಂದ |




4.2.4. ಒಂದು ವೃತ್ತಕ್ಕೆ ವ್ಯಾಸದ ಅಂತ್ಯ ಬಿಂದುವಿನಲ್ಲಿ ಎಳೆದ ಸ್ಪರ್ಶಕಗಳು ಪರಸ್ಪರ ಸಮಾಂತರವಾಗಿವೆ ಎಂದು ಸಾಧಿಸಿ.

| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $OA \perp RS$ & $OB \perp PQ$ | ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ |
| 2 | $\angle OAR = \angle OAS = \angle OBP = \angle OBQ = 90^0$ | (1) ರಿಂದ |
| 3 | $\angle OAR = \angle OBQ$ & $\angle OAS = \angle OBP$ | (2) ರಿಂದ |
| 4 | PQ\|\|RS | (3) ರಿಂದ ಒಳ ಪರ್ಯಾಯ ಕೋನಗಳು ಸಮ. |





A Project of www.eShale

4.2.5. ಸ್ಪರ್ಶ ಬಿಂದುವಿನಲ್ಲಿ ಸ್ಪರ್ಶಕಕ್ಕೆ ಎಳೆದ ಲಂಬವು ವೃತ್ತದ ಕೇಂದ್ರದ ಮೂಲಕ ಹಾದು ಹೋಗುತ್ತದೆ ಎಂದು ಸಾಧಿಸಿ.


ರಚನೆ: P ಯಿಂದ AB ಸ್ಪರ್ಶಕಕ್ಕೆ ಎಳೆದ ಲಂಬವು ಕೇಂದ್ರಬಿಂದು O ನಿಂದ ಹಾದು ಹೋಗದೇ $O'$ ಮೂಲಕ ಹಾದು ಹೋಗುತ್ತದೆ ಎನ್ನುವಂತೆ $PO'$ ಎಳೆದಿದೆ

| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\angle O'PB = 90^0$ | ರಚನೆ |
| 2 | $\angle OPB = 90^0$ | OP ತ್ರಿಜ್ಯವು ಸ್ಪರ್ಶಬಿಂದು P ಯಿಂದ ಕೇಂದ್ರಕ್ಕೆ ಎಳೆದ ರೇಖೆ ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ |
| 3 | OP ಮತ್ತು $O'P$ ಐಕ್ಯ ಆಗಲೇ ಬೇಕು | $\angle O'PB = \angle OPB$ ಕೋನಗಳು ಸಮ |




4.2.6. ವೃತ್ತ ಕೇಂದ್ರದಿಂದ 5 cm ದೂರದಲ್ಲಿರುವ A ಬಿಂದುವಿನಿಂದ ಎಳೆದ ಸ್ಪರ್ಶಕದ ಉದ್ದವು 4 cm ಇದೆ. ವೃತ್ತದ ತ್ರಿಜ್ಯದ ಉದ್ದವನ್ನು ಕಂಡುಹಿಡಿಯಿರಿ


| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\angle OPQ = 90^0$ | ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ |
| 2 | $OQ^2 = OP^2 + PQ^2$ | |
| 3 | $5^2 = OP^2 + 4^2$ | |
| 4 | $25 = OP^2 + 16$ | |
| 5 | $OP^2 = 25 - 16 = 9$ | |
| 6 | $OP = 3cm$ | |




A Project of www.eShale.org


4.2.7. ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5 cm ಮತ್ತು 3 cm ಆಗಿವೆ. ಚಿಕ್ಕ ವೃತ್ತಕ್ಕೆ ಸ್ಪರ್ಶಿಸುವಂತೆ ದೊಡ್ಡ ವೃತ್ತದ ಜ್ಯಾದ ಉದ್ದವನ್ನು ಕಂಡುಹಿಡಿಯಿರಿ.

| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\angle OPA = 90^0$ | ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ |
| 2 | $OA^2=OP^2+PA^2$ | |
| 3 | $PA^2 = OA^2-OP^2$ <br> $=5^2-3^2=25-9=16=4^2$ | |
| 4 | $\therefore PA=4cm$ | |
| 5 | PA=PB | $\Delta POA$ ಮತ್ತು $\Delta POB$ ಗಳು ಸರ್ವಸಮ. ಲಂ.ಕ.ಬಾ ಸ್ವಯಂಸಿದ್ಧ |
| 6 | AB=AP+PB=4+4=8cm | (5) ರಿಂದ |




4.2.8. ABCD ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾಗಿದೆ. (ಚಿತ್ರ ನೋಡಿ). AB + CD =AD + BC ಎಂದು ಸಾಧಿಸಿ.

| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | AS=AR | ಬಾಹ್ಯ ಬಿಂದುವಿನಿಂದ (A) ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ. |
| 2 | DQ=DR | ಬಾಹ್ಯ ಬಿಂದುವಿನಿಂದ (D) ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ. |
| 3 | QC=CP | ಬಾಹ್ಯ ಬಿಂದುವಿನಿಂದ (C) ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ. |
| 4 | BS=BP | ಬಾಹ್ಯ ಬಿಂದುವಿನಿಂದ (B) ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ. |
| 5 | AS+DQ+QC+BS=AR+DR+CP+BP | (1)+(2)+(3)+(4) |
| 6 | $\therefore$ AB+DC=AD+BC | |





A Project of www.eShale.or

4.2.9. ಚಿತ್ರದಲ್ಲಿ, 'O' ವೃತ್ತ ಕೇಂದ್ರ ಹೊಂದಿರುವ ಒಂದು ವೃತ್ತಕ್ಕೆ XY ಮತ್ತು X'Y' ಸಮಾಂತರ ಸ್ಪರ್ಶಕಗಳಾಗಿವೆ ಮತ್ತು ಸ್ಪರ್ಶ ಬಿಂದು C ನಲ್ಲಿ ಎಳೆದ ಮತ್ತೊಂದು ಸ್ಪರ್ಶಕ AB ಯು XY ಅನ್ನು A ಬಿಂದುವಿನಲ್ಲಿ ಮತ್ತು X'Y' ಅನ್ನು B ಬಿಂದುವಿನಲ್ಲಿ ಛೇದಿಸುತ್ತದೆ. ಹಾಗಾದರೆ $\angle AOB = 90°$ ಎಂದು ಸಾಧಿಸಿ.

ರಚನೆ: O ಮತ್ತು C ಸೇರಿಸಿ


| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\Delta OAP$ & $\Delta OAC$ ಗಳಲ್ಲಿ | |
| 2 | OP = OC | ಒಂದೇ ವೃತ್ತದ ತ್ರಿಜ್ಯಗಳು |
| 3 | AP = AC | ಸ್ಪರ್ಶಕ |
| 4 | AO = OA | ಸಾಮಾನ್ಯ ಬಾಹು |
| 5 | $\Delta OAP \cong \Delta OAC$ | ಬಾ.ಬಾ.ಬಾ. ಸ್ವಯಂಸಿದ್ಧ |
| 6 | $\angle POA = \angle COA$ | ಅನುರೂಪ ಕೋನಗಳು ಸಮ |
| 7 | $\angle QOB = \angle COB$ | ಮೇಲಿನಂತೆ $\Delta OQB \cong \Delta OCB$ ಎಂದು ಸಾಧಿಸಿ |
| 7 | $\angle POA + \angle COA + \angle QOB + \angle COB = 180^O$ | ಸರಳ ರೇಖೆಯ ಮೇಲಿನ ಕೋನಗಳ ಮೊತ್ತ $180^0$ |
| 8 | $\therefore 2\angle COA + 2\angle COB = 180^O \Rightarrow \angle COA + 2\angle COB = 90^O \Rightarrow \angle AOB = 90^O$ | |




A Project of www.eShale.org

4.2.10. ಬಾಹ್ಯ ಬಿಂದುವಿನಿಂದ ಒಂದು ವೃತ್ತಕ್ಕೆ ಎಳೆದ ಎರಡು ಸ್ಪರ್ಶಕಗಳ ನಡುವಿನ ಕೋನ ಹಾಗೂ ಸ್ಪರ್ಶ ಬಿಂದುಗಳನ್ನು ವೃತ್ತಕೇಂದ್ರಕ್ಕೆ ಸೇರಿಸುವಂತೆ ಎಳೆದ ರೇಖಾಖಂಡಗಳ ನಡುವಿನ ಕೋನಗಳು ಪರಿಪೂರಕಗಳಾಗಿರುತ್ತವೆ ಎಂದು ಸಾಧಿಸಿ


| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | $\angle OAP = \angle PBO = 90^O$ | ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ |
| 2 | $\angle OAP + \angle APB + \angle PBO + \angle BOA = 360^O$ | ಚತುರ್ಭುಜದ ನಾಲ್ಕೂ ಒಳಕೋನಗಳ ಮೊತ್ತ $360^O$ |
| 3 | $90^O + \angle APB + 90^O + \angle BOA = 360^O$ | (2) ರಿಂದ |
| 4 | $\angle APB + \angle BOA = 180^O$ | |




A Project of www.eShale

4.2.11. ಒಂದು ಸಮಾಂತರ ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ ಸಮಾಂತರ ಚತುರ್ಭುಜವು ವಜ್ರಾಕೃತಿಯಾಗುತ್ತದೆ ಎಂದು ಸಾಧಿಸಿ.

| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | AS=AR | ಬಾಹ್ಯ ಬಿಂದುವಿನಿಂದ (A) ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ. |
| 2 | DQ=DR | ಬಾಹ್ಯ ಬಿಂದುವಿನಿಂದ (D) ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ. |
| 3 | QC=CP | ಬಾಹ್ಯ ಬಿಂದುವಿನಿಂದ (C) ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ. |
| 4 | BS=BP | ಬಾಹ್ಯ ಬಿಂದುವಿನಿಂದ (B) ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ. |
| 5 | AS+DQ+QC+BS=AR+DR+CP+BP | (1)+(2)+(3)+(4) |
| 6 | ∴ AB+DC=AD+BC | |
| 7 | AB=CD & AD=BC | ಸಮಾಂತರ ಚತುರ್ಭುಜದ ಅಭಿಮುಖ ಬಾಹುಗಳು ಸಮ |
| 7 | ∴ 2AB=2AD ⇒ AB=AD | (6) ರಿಂದ |
| 8 | ⇒ AB=BC=CD=DA | ಸಮಾಂತರ ಚತುರ್ಭುಜದ ನಾಲ್ಕೂ ಬಾಹುಗಳು ಸಮವಾಗಿರುವುದರಿಂದ ಅದು ಕನಿಷ್ಠ ಎಂದರೆ ವಜ್ರಾಕೃತಿಯಾಗಿರುತ್ತದೆ. |





A Project of www.eShale.org

4.2.12. ಸ್ಪರ್ಶ ಬಿಂದು D ಯು BC ಬಾಹುವನ್ನು BD ಮತ್ತು DC ಯ ಉದ್ದ ಕ್ರಮವಾಗಿ 8 cm ಮತ್ತು 6 cm ಇರುವಂತೆ 4 cm ತ್ರಿಜ್ಯವಿರುವ ಒಂದು ವೃತ್ತವು $\Delta$ABC ನಲ್ಲಿ ಆವೃತ್ತಗೊಳಿಸಲು ಅಂತಸ್ಥವಾಗಿರುವಂತೆ ರಚಿಸಲಾಗಿದೆ. [ಚಿತ್ರ ನೋಡಿ], AB ಮತ್ತು AC ಬಾಹುಗಳ ಉದ್ದವನ್ನು ಕಂಡುಹಿಡಿಯಿರಿ.

ಸ್ಪರ್ಶಕದ ಉದ್ದ x ಆಗಿರಲಿ. AE=AF=x


| ಹಂತ. | ನಿರೂಪಣೆ | ಕಾರಣಗಳು |
|---|---|---|
| 1 | CE=CD=6 & BF=BD=8 | ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮ |
| 2 | AC=AE+CE=x+6 & AB=AF+FB=x+8 | |
| 3 | 2s= AC+CB+BA=(x+6)+14+(x+8)= x+28<br>$\therefore$ s=x+14 | ಹೆರಾನ್ ಸೂತ್ರದ 2s |
| 4 | ಹೆರಾನ್ ಸೂತ್ರದಂತೆ $\Delta$ABC ವಿಸ್ತೀರ್ಣ $\sqrt{s(s-a)(s-b)(s-c)}$ | |
| 5 | $\sqrt{(x+14)[x+14-(x+6)](x+14-14)[x+14-(x+8)]} = \sqrt{(x+14)*8*x*6}$<br>$=\sqrt{48x(x+14)}$ | |
| 6 | $\frac{1}{2}$AC*OE=$\frac{1}{2}$(x+6)*4=2x+12 | $\Delta$AOC ವಿಸ್ತೀರ್ಣ |
| 7 | $\frac{1}{2}$BC*OD=$\frac{1}{2}$14*4=28 | $\Delta$BOC ವಿಸ್ತೀರ್ಣ |
| 8 | $\frac{1}{2}$AB*OF=$\frac{1}{2}$(x+8)*4=2x+16 | $\Delta$AOB ವಿಸ್ತೀರ್ಣ |
| 9 | $\sqrt{48x(x+14)}$ =(2x+12)+28+(2x+16)= 4x+56 | $\Delta$ABC ವಿಸ್ತೀರ್ಣ= $\Delta$AOC ವಿಸ್ತೀರ್ಣ + $\Delta$BOC ವಿಸ್ತೀರ್ಣ+ $\Delta$AOB ವಿಸ್ತೀರ್ಣ<br>(4)=(5)+(6)+(7) |
| 10 | $48x(x+14)=(4x+56)^2=4(x+14)*4(x+14)$<br>$\Rightarrow$ 48x= 16(x+14)<br>$\therefore$ 32x= 16*14 $\Rightarrow$ x=7 | (9)ನ್ನು ವರ್ಗೀಕರಿಸಿ &<br>$(4x+56)^2=[4(x+14)]^2$ |
| 11 | AC=x+6=7+6=13cm & AB=x+8=6+8=14cm | |




A Project of www.eShale.org

4.2.13. ಒಂದು ಚತುರ್ಭುಜದಲ್ಲಿ ವೃತ್ತವು ಅಂತಸ್ಥವಾದಾಗ,ವೃತ್ತದ ಕೇಂದ್ರದಲ್ಲಿ ಚತುರ್ಭುಜದ ಅಭಿಮುಖ ಬಾಹುಗಳಿಂದ ಉಂಟಾದ ಕೋನಗಳು ಪರಿಪೂರಕಗಳು ಆಗಿರುತ್ತದೆ ಎಂದು ಸಾಧಿಸಿ.

ಅಂದರೆ ಕೆಳಗಿನ ಚಿತ್ರದಲ್ಲಿ $\angle AOB + \angle COD = 180^{O}$ & $\angle BOC + \angle AOD = 180^{O}$ ಎಂದು ತೋರಿಸಬೇಕು




| ಹಂತ. | ನಿರೂಪಣೆ | ಕಾರಣಗಳು |
|---|---|---|
| | $\Delta AOP$ & $\Delta AOS$ ಗಳಲ್ಲಿ | |
| 1 | OP = OS | ಒಂದೇ ವೃತ್ತದ ತ್ರಿಜ್ಯಗಳು |
| 2 | AP = AS | ಸ್ಪರ್ಶಕ |
| 3 | AO = OA | ಸಾಮಾನ್ಯ ಬಾಹು |
| 4 | $\Delta AOP \cong \Delta AOS$ | ಬಾ.ಬಾ.ಬಾ. ಸ್ವಯಂಸಿದ್ಧ |
| 5 | $\angle AOP = \angle AOS$ ; $\angle 1 = \angle 8$ | ಅನುರೂಪ ಕೋನಗಳು ಸಮ |
| 6 | $\angle 2 = \angle 3$ , $\angle 4 = \angle 5$, $\angle 6 = \angle 7$ | ಮೇಲಿನಂತೆ $\Delta BOP \cong \Delta BOQ$, $\Delta COQ \cong \Delta COR$ & $\Delta DOR \cong \Delta DOS$ ಎಂದು ಸಾಧಿಸಿ |
| 7 | $\therefore \angle 1 + \angle 2 + \angle 3 + \angle 4 + \angle 5 + \angle 6 + \angle 7 + \angle 8 = 360^{O}$ | ಕೇಂದ್ರದಲ್ಲಿ ಉಂಟಾಗುವ ಕೋನ = $360^{O}$ |
| 8 | $\Rightarrow \angle 1 + \angle 2 + \angle 2 + \angle 5 + \angle 5 + \angle 6 + \angle 6 + \angle 1 = 360^{O}$ | (6)ರಿಂದ |
| 9 | $\Rightarrow 2(\angle 1 + \angle 2 + \angle 5 + \angle 6) = 360^{O}$ | |
| 10 | $\therefore (\angle 1 + \angle 2 + \angle 5 + \angle 6) = 180^{O} \Rightarrow \angle AOB + \angle COD = 180^{O}$ ಹೀಗೆಯೇ $\angle BOC + \angle AOD = 180^{O}$ | |

A Project of www.eShale.c